ಮುಗ್ಧ, ಬುದ್ಧಿವಂತ ಯುವಕರ ಬದುಕನ್ನು ದುರಂತಕ್ಕೆ ತಳ್ಳುವ ರೀತಿ, ಯಾವುದೇ ಆಯುಧಗಳಿಲ್ಲದೆ ಮನುಷ್ಯರನ್ನು ಕೊಲ್ಲುವಂತೆ ಭಾಸವಾಗುತ್ತದೆ. ರಾಜಕಾರಣಿಗಳ ಹಸ್ತಕ್ಷೇಪದಿಂದಾಗಿ ಎಲ್ಲಾ ಕ್ಷೇತ್ರಗಳು ಇಂದು ಎಂತಹ ದುಃಸ್ಥಿತಿಯನ್ನು ಎದುರಿಸುತ್ತಿವೆ ಎನ್ನುವುದನ್ನು ಕಾದಂಬರಿ ವಿವರಿಸುತ್ತದೆ.

ಧಾರ್ಮಿಕ ಮತ್ತು ರಾಜಕೀಯ ಕ್ಷೇತ್ರಗಳು ಒಂದೇ ನಾಣ್ಯದ ಎರಡು ಮುಖಗಳು ಎನ್ನುವುದನ್ನು ಕಾದಂಬರಿ ಚಿತ್ರಿಸಿದೆ. ಮಠಾಧಿಪತಿಗಳು ಮತ್ತು ರಾಜಕಾರಣಿಗಳು ಪರಸ್ಪರ ಹೊಂದಾಣಿಕೆಯೊಂದಿಗೆ ತಮ್ಮ ವ್ಯವಹಾರಗಳನ್ನು ಮಾಡಿಕೊಳ್ಳುತ್ತಿರುತ್ತಾರೆ. ಈ ಇಬ್ಬರ ನಡುವಿನ ಹೊಂದಾಣಿಕೆ ಸಮಾಜಕ್ಕೆ ಸಮಸ್ಯೆಯಾಗಿದೆ. ಇತ್ತ ದಯಾನಂದ ಪ್ರಸಾದನ ಪರವಾಗಿ ರಾಜಕೀಯ ಪ್ರಚಾರಕ್ಕೆಂದು ಇದ್ದ ಕೆಲಸವನ್ನು ಬಿಟ್ಟುಬಂದ ಕನ್ನಮರಿ ಕೊನೆಗೆ ಪ್ರಸಾದನ ಕುತಂತ್ರದಿಂದ ನಿರಪರಾಧಿಯಾಗಿದ್ದರೂ ಜೈಲು ಸೇರಬೇಕಾಗುತ್ತದೆ. ಜೈಲಿನಿಂದ ಹೊರಬಂದ ಮೇಲೆ ಕನ್ನಮರಿ ದಯಾನಂದ ಪ್ರಸಾದರ ಬಳಿ ಕೆಲಸ ಕೇಳಲು ಬಂದಾಗ, ಅವನನ್ನು ಮಠವೊಂದರ ರೋಗಪೀಡಿತ ಸ್ವಾಮೀಜಿಯನ್ನು ನೋಡಿಕೊಳ್ಳುವ ಚಾಕರಿಗೆ ನೇಮಿಸಲಾಗುತ್ತದೆ. 'ಸದ್ಯಕ್ಕೆ ಈ ಕೆಲಸ ಮಾಡು, ಮುಂದೆ ಇದೇ ಮಠದಲ್ಲಿ ಉಪನ್ಯಾಸಕ ಹುದ್ದೆ ಕೊಡಿಸುವುದಾಗಿ' ಪ್ರಸಾದರು ಕನ್ನಮರಿಗೆ ಆಶ್ವಾಸನೆ ನೀಡುತ್ತಾರೆ. ಮುಂದೆ ನಡೆದದ್ದೆಲ್ಲ ಮಠದೊಳಗಣ ಬೆಕ್ಕಿನ ಕಥೆ. ಮಠದೊಳಗಿನ ರಾಜಕೀಯ, ಕುತಂತ್ರಗಳು ಈ ಸಮಾಜದೆದುರು ಬೆತ್ತಲಾಗುವ ಸನ್ನಿವೇಶವನ್ನು ಕಾದಂಬರಿ ತೆರೆದಿಟ್ಟಿದೆ.

ಕನ್ನಮರಿ ಬಹಳ ನಿಷ್ಠೆಯಿಂದ ತನ್ನ ಕೆಲಸವನ್ನು ಮಾಡಿಕೊಂಡಿರುತ್ತಾನೆ. ಇವನ ನಿಷ್ಠೆ, ಪ್ರಾಮಾಣಿಕತೆಯನ್ನು ಕಂಡ ಪ್ರಸಾದ ಮತ್ತು ಮಠದ ಬುದ್ಧಿಯವರು, ಮುಂದೆ ತಮ್ಮ ಪರ್ಯಾಯ ಮಠದ ರೋಗಪೀಡಿತ ಸ್ವಾಮೀಜಿಗಳು ತೀರಿಕೊಂಡ ನಂತರ ಇವನನ್ನು ಉತ್ತರಾಧಿಕಾರಿ ಮಾಡಿದರೆ ತಮಗೆ ಅನುಕೂಲವಾಗುತ್ತದೆಂದು ತೀರ್ಮಾನಿಸುತ್ತಾರೆ. ಬುದ್ಧಿಯವರಿಗೆ ಒಬ್ಬ ಕೆಳ ಜಾತಿಯವನನ್ನು ನಮ್ಮ ಮಠದ ಪೀಠಾಧಿಪತಿ ಮಾಡಿದೆ ಎನ್ನುವ ಜಾತ್ಯತೀತತೆಯ ಕಿರೀಟ ತಮ್ಮ ಮಠಕ್ಕೆ ಬರುತ್ತದೆನ್ನುವ ಆಸೆ. ತಾನು ಬೆಳೆಸಿದ ಪ್ರಾಮಾಣಿಕ, ನಿಷ್ಠಾವಂತ ಹುಡುಗನನ್ನು ಮಠಕ್ಕೆ ಕೊಟ್ಟ ಕಾರ್ಯಸಾಧುತನ ಪ್ರಸಾದನಿಗೆ. ಇವರಿಬ್ಬರ ನಡುವಿನ ದಾಳವಾಗಿ ಕನ್ನಮರಿ ಬಳಕೆಗೊಳ್ಳುವ ಕಾರ್ಯವಿಧಾನದ ದುರಂತವನ್ನು ಕಾದಂಬರಿ ಚೆನ್ನಾಗಿ ಗ್ರಹಿಸಿದೆ. ಕನ್ನಮರಿಯು 'ಶ್ರೀಶ್ರೀಶ್ರೀ ಕಪಿಲಸಿದ್ಧ ಮಲ್ಲಿಕಾರ್ಜುನ' ಎಂಬ ನಾಮಾಂಕಿತದೊಂದಿಗೆ ಮಲಪನಹಳ್ಳಿ ಶಾಖಾಮಠಕ್ಕೆ ಸ್ವಾಮೀಜಿಯಾಗಿ ಬಂದು, ಒಳ್ಳೆಯ ಕೆಲಸ ಮಾಡುವುದರೊಂದಿಗೆ ಮಠಕ್ಕೆ ಕೀರ್ತಿ ತರುತ್ತಾನೆ, ಭಕ್ತರ ವಿಶ್ವಾಸ ಗಳಿಸುತ್ತಾನೆ. ಹಳ್ಳಿ ಹಳ್ಳಿ ತಿರುಗಿ ಜನರಲ್ಲಿ ಜಾಗೃತಿ ಮೂಡಿಸುವುದರ ಜೊತೆಗೆ ಮಠವನ್ನು ಅಭಿವೃದ್ಧಿ ಪಡಿಸುತ್ತಾನೆ. ಕೊನೆಗೆ, ಯಾರಿಗೂ ಹೇಳದೆ ಕನ್ನಮರಿಯಾಗಿ ತನ್ನ ತಾಯಿ ನೋಡಲು ಕಾನುಮಡುವಿಗೆ ಬರುತ್ತಾನೆ. ಆದರೆ ತಾಯಿ ಇಲ್ಲದ ವಿಚಾರವನ್ನು ತಿಳಿದು ಕನ್ನಮರಿ ಮರುಗುತ್ತಾನೆ.

ಪ್ರಕೃತಿಯ ನೀರವತೆ, ಹಸಿರು, ಅದರ ತಾಯ್ತನದ ಪ್ರೀತಿಯಲ್ಲಿ ಕನ್ನಮರಿ ಕಳೆದುಹೋಗುತ್ತಾನೆ. ಇದು ಈ ಕಾದಂಬರಿಯ ಬಹಳ ಮುಖ್ಯವಾದ ಅಂಶ. ಮನುಷ್ಯ ಪ್ರಕೃತಿಯೊಂದಿಗಿನ ತನ್ನ ಬದುಕಿನ ಒಡನಾಟದ ಸಖ್ಯ ಮತ್ತು ಸೌಖ್ಯಗಳನ್ನು ಈ ಕಾದಂಬರಿ ತಿಳಿಸುತ್ತದೆ. ಸಮಾಜಕ್ಕಿಂತ ಪ್ರಕೃತಿ ಮಾನವಪ್ರಾಣಿಗಳನ್ನು ಮನುಷ್ಯರಾಗಿಸುವ ಬಗೆಯನ್ನು ಕನ್ನಮರಿ ಕಂಡುಕೊಳ್ಳುವ ವಿಧಾನ ಮಹತ್ವದ್ದು. ಬಾಲ್ಯದಲ್ಲಿ ಅಂತರ್ಮುಖಿಯಾಗಿ ಕಾಣಿಸುವ ಕನ್ನಮರಿ, ಬೆಳೆಯುತ್ತಾ ಅವಧೂತನಾಗುವ ರೂಪಾಂತರವೂ ಮುಖ್ಯವಾದುದು.

ಆತ್ಮಕಥನದ ನಿರೂಪಣಾ ಶೈಲಿಯಲ್ಲಿ ರೂಪುಗೊಂಡಿರುವುದು ಕಾದಂಬರಿಯ ಮತ್ತೊಂದು ಮುಖ್ಯವಾದ ಅಂಶ. ಈ ನಿರೂಪಣೆಗೆ ಹನೂರರು ಬಳಸಿಕೊಂಡಿರುವ ತಂತ್ರ ಕುತೂಹಲಕರವಾಗಿದೆ. ಗುರುಗಳು ತನ್ನ ಶಿಷ್ಯನ ಹುಡುಕಾಟದ ಸಂದರ್ಭದಲ್ಲಿ ಸಿಗುವ 'ಕನ್ನಮರಿ ಬರೆದಿದ್ದಾನೆ' ಎನ್ನುವ ಅಸ್ತವ್ಯಸ್ತ ಹಾಳೆಗಳ ಜೋಡಣೆಯೇ ಈ ಕಾದಂಬರಿ. ಈ ಕೃತಿಯಲ್ಲಿ 12ನೇ ಶತಮಾನದ ಸಾಮಾಜಿಕ, ಧಾರ್ಮಿಕ, ರಾಜಕೀಯ ಪ್ರಜ್ಞೆ ಮತ್ತು ಕಾಳಜಿ ಎದ್ದು ಕಾಣುತ್ತದೆ. ಈ ಅಂಶಗಳನ್ನು ಸಮಕಾಲೀನಗೊಳಿಸಿರುವ ರೀತಿ ಗಮನಸೆಳೆಯುವಂತಹದ್ದು. ಕಾದಂಬರಿಯಲ್ಲಿ ಬಳಸಿರುವ ರೂಪಕ ಮತ್ತು ಪ್ರಾದೇಶಿಕ ಭಾಷೆಯ ನುಡಿಗಟ್ಟುಗಳು ಕೃತಿಯ ಮೆರುಗನ್ನು ಇನ್ನಷ್ಟು ಹೆಚ್ಚಿಸಿದೆ. ●